1085
19/11/07

# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಸರ್ಕಾರಿ ಕೋಟಾದ ಶುಶ್ರೂಷಾ ವಿದ್ಯಾರ್ಥಿಗಳ ಶುಲ್ಕ ಪರಿಷ್ಕರಣೆಯ ಬಗ್ಗೆ.

ಓದಲಾಗಿದೆ:

1) ಸರ್ಕಾರಿ ಆದೇಶ ಸಂಖ್ಯೆ: ಆಕುಕ 222 ವೈಶಿತ 95, ದಿನಾಂಕ 16-02-2000.
2) ಪತ್ರ ಸಂಖ್ಯೆ: ನಿವೈಶಿ/ಎನ್.ಆರ್.ಸಿ.(2)48/2004-05, ದಿನಾಂಕ 24-05-2005.
3) ಪತ್ರ ಸಂಖ್ಯೆ: ನಿವೈಶಿ/ಎನ್.ಆರ್.ಸಿ.(2)48/2004-05, ದಿನಾಂಕ 24-07-2007.

ಪ್ರಸ್ತಾವನೆ:

ಕರ್ನಾಟಕ ರಾಜ್ಯದ ಖಾಸಗಿ ನರ್ಸಿಂಗ್ ಶಾಲೆಗಳಲ್ಲಿ ಸರ್ಕಾರಿ ಸೀಟುಗಳಿಗೆ ಆಯ್ಕೆಯಾದ ವಿದ್ಯಾರ್ಥಿಗಳಿಗೆ ಮೇಲೆ (1)ರಲ್ಲಿ ಓದಲಾದ ಸರ್ಕಾರದ ಆದೇಶದಲ್ಲಿ ಈ ಕೆಳಕಂಡಂತೆ ಶುಲ್ಕವನ್ನು 1999-2000ನೇ ಶೈಕ್ಷಣಿಕ ಸಾಲಿನಿಂದ ಜಾರಿಗೆ ಬರುವಂತೆ ನಿಗದಿ ಪಡಿಸಲಾಗಿತ್ತು.

| ಕ್ರ. ಸಂ. | ಬಾಬತ್ತು | ಶುಲ್ಕ ರೂ.ಗಳಲ್ಲಿ |
|---|---|---|
| 01 | ಹಾಜರಾತಿ ಶುಲ್ಕ | 90/- |
| 02 | ಬೋಧನಾ ಶುಲ್ಕ | 800/- |
| 03 | ಗ್ರಂಥಾಲಯ ಶುಲ್ಕ | 50/- |
| 04 | ಪ್ರಯೋಗಾಲಯ ಶುಲ್ಕ | 50/- |
| 05 | ಕ್ರೀಡಾ ಶುಲ್ಕ | 10/- |
| | ಒಟ್ಟು | 1,000/- |

ನಿರ್ದೇಶಕರು, ವೈದ್ಯಕೀಯ ಶಿಕ್ಷಣ ಇಲಾಖೆ, ಬೆಂಗಳೂರು ರವರು ಮೇಲೆ (2)ರಲ್ಲಿ ಓದಲಾದ ತಮ್ಮ ಪತ್ರದಲ್ಲಿ ಶುಶ್ರೂಷಾ ತರಬೇತಿಗೆ ಬರುವ ಅಭ್ಯರ್ಥಿಗಳು ರಾಜ್ಯದ ಹಳ್ಳಿಗಾಡಿನವರಾಗಿದ್ದು ಆರ್ಥಿಕವಾಗಿ ತುಂಬ ಹಿಂದುಳಿದವರಾಗಿರುತ್ತಾರೆಂದು ವರದಿ ಮಾಡುತ್ತ ಖಾಸಗಿ ನರ್ಸಿಂಗ್ ಶಾಲೆಗಳಲ್ಲಿ ಸರ್ಕಾರಿ ಕೋಟಾದ ಸೀಟುಗಳನ್ನು ಪಡೆಯುವ ಅಭ್ಯರ್ಥಿಗಳಿಗೆ ಈ ಕೆಳಗಿನಂತೆ ಶುಲ್ಕವನ್ನು ನಿಗದಿಪಡಿಸುವಂತೆ ಸರ್ಕಾರವನ್ನು ಕೋರಿರುತ್ತಾರೆ.

| ಕ್ರ. ಸಂ. | ಬಾಬತ್ತು | ಶುಲ್ಕ ರೂ.ಗಳಲ್ಲಿ |
|---|---|---|
| 01 | ಹಾಜರಾತಿ ಶುಲ್ಕ | 300/- |
| 02 | ಬೋಧನಾ ಶುಲ್ಕ | 3,600/- |
| 03 | ಗ್ರಂಥಾಲಯ ಶುಲ್ಕ | 250/- |
| 04 | ಪ್ರಯೋಗಾಲಯ ಶುಲ್ಕ | 250/- |
| 05 | ಕ್ರೀಡಾ ಶುಲ್ಕ | 100/- |
| | ಒಟ್ಟು | 4,500/- |

ವಿಷಯವನ್ನು ಸಂಬಂಧಿಸಿದ ದಾಖಲೆಗಳೊಂದಿಗೆ ಕೂಲಂಕಷವಾಗಿ ಪರಿಶೀಲಿಸಿದ ನಂತರ ರಾಜ್ಯದ ಖಾಸಗಿ ನರ್ಸಿಂಗ್ ಶಾಲೆಗಳಲ್ಲಿ ಸರ್ಕಾರಿ ಕೋಟಾದ ಸೀಟುಗಳನ್ನು

ಪಡೆಯುವ ಅಭ್ಯರ್ಥಿಗಳಿಗೆ ಶುಲ್ಕವನ್ನು ಈ ಕೆಳಗಿನಂತೆ ಪರಿಷ್ಕರಿಸಲು ಸರ್ಕಾರವು ತೀರ್ಮಾನಿಸಿ ಈ ಆದೇಶವನ್ನು ಹೊರಡಿಸಿದೆ.

| ಕ್ರ. ಸಂ. | ಬಾಬತ್ತು | ಶುಲ್ಕ ರೂ.ಗಳಲ್ಲಿ |
|---|---|---|
| 01 | ಹಾಜರಾತಿ ಶುಲ್ಕ | 300/- |
| 02 | ಬೋಧನಾ ಶುಲ್ಕ | 3,600/- |
| 03 | ಗ್ರಂಥಾಲಯ ಶುಲ್ಕ | 250/- |
| 04 | ಪ್ರಯೋಗಾಲಯ ಶುಲ್ಕ | 250/- |
| 05 | ಕ್ರೀಡಾ ಶುಲ್ಕ | 100/- |
| | ಒಟ್ಟು | 4,500/- |

**ಸರ್ಕಾರಿ ಆದೇಶ ಸಂಖ್ಯೆ: ಆಕುಕ 267 ಎಂಎಸ್‌ಎಫ್ 2006, ಬೆಂಗಳೂರು, ದಿನಾಂಕ 13-11-2007**

ಕರ್ನಾಟಕ ರಾಜ್ಯದಲ್ಲಿರುವ ಖಾಸಗಿ ನರ್ಸಿಂಗ್ ಶಾಲೆಗಳಲ್ಲಿ ಸರ್ಕಾರಿ ಕೋಟಾದಡಿ ವ್ಯಾಸಂಗ ಮಾಡುವ ಅಭ್ಯರ್ಥಿಗಳಿಗೆ ವಾರ್ಷಿಕ ಶುಲ್ಕವನ್ನು 2008-09ನೇ ಶೈಕ್ಷಣಿಕ ಸಾಲಿನಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ಈ ಕೆಳಗಿನಂತೆ ಪರಿಷ್ಕರಿಸಿ ನಿಗದಿಗೊಳಿಸಲಾಗಿದೆ.

| ಕ್ರ. ಸಂ. | ಬಾಬತ್ತು | ಶುಲ್ಕ ರೂ.ಗಳಲ್ಲಿ |
|---|---|---|
| 01 | ಹಾಜರಾತಿ ಶುಲ್ಕ | 300/- |
| 02 | ಬೋಧನಾ ಶುಲ್ಕ | 3,600/- |
| 03 | ಗ್ರಂಥಾಲಯ ಶುಲ್ಕ | 250/- |
| 04 | ಪ್ರಯೋಗಾಲಯ ಶುಲ್ಕ | 250/- |
| 05 | ಕ್ರೀಡಾ ಶುಲ್ಕ | 100/- |
| | ಒಟ್ಟು | 4,500/- |

ಈ ಆದೇಶವನ್ನು ಆರ್ಥಿಕ ಇಲಾಖೆಯ ಅನಧಿಕೃತ ಟಿಪ್ಪಣಿ ಸಂಖ್ಯೆ: ಆಇ:1891:ವೆಚ್ಚ:5/2007, ದಿನಾಂಕ 16-10-2007ರ ಸಹಮತಿಯೊಂದಿಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

ವಿ. [signature] 13/11/200

(ವಿ. ಶ್ರೀರಾಮರೆಡ್ಡಿ)
ಸರ್ಕಾರದ ಅಧೀನ ಕಾರ್ಯದರ್ಶಿ,
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ.
(ವೈದ್ಯಕೀಯ ಶಿಕ್ಷಣ)

ಇವರಿಗೆ:

ಸಂಕಲನಕಾರರು, ಕರ್ನಾಟಕ ರಾಜ್ಯ ಪತ್ರ, ಬೆಂಗಳೂರು - ಮುಂದಿನ ಸಂಚಿಕೆಯಲ್ಲಿ ಪ್ರಕಟಿಸುವಂತೆ ಕೋರಿದೆ.

ಪ್ರತಿ:

1) ಮಹಾಲೇಖಪಾಲರು (ಎ & ಇ), ಕರ್ನಾಟಕ, ಬೆಂಗಳೂರು.
2) ವೈದ್ಯಕೀಯ ಶಿಕ್ಷಣ ನಿರ್ದೇಶಕರು, ಬೆಂಗಳೂರು.
3) ನಿಬಂಧಕರು, ಕರ್ನಾಟಕ ನರ್ಸಿಂಗ್ ಕೌನ್ಸಿಲ್, ನಂ.71, ನೈಟಿಂಗೇಲ್ ಟವರ್ಸ್, ಎ-ಸ್ಟ್ರೀಟ್, 6ನೇ ಅಡ್ಡರಸ್ತೆ, ಎ.ಆರ್.ಬಡಾವಣೆ, ಗಾಂಧಿನಗರ, ಬೆಂಗಳೂರು-560 009.
4) ರಾಜ್ಯದ ಎಲ್ಲಾ ಖಾಸಗಿ ನರ್ಸಿಂಗ್ ಶಾಲೆಗಳ ಮುಖ್ಯಸ್ಥರು - (ಕರ್ನಾಟಕ ನರ್ಸಿಂಗ್ ಕೌನ್ಸಿಲ್ ಮೂಲಕ)
5) ಸರ್ಕಾರದ ಕಾರ್ಯದರ್ಶಿಯವರ ಆಪ್ತ ಸಹಾಯಕರು, ವೈದ್ಯಕೀಯ ಶಿಕ್ಷಣ ಇಲಾಖೆ.
6) ಸರ್ಕಾರದ ಜಂಟಿ ಕಾರ್ಯದರ್ಶಿಯವರ ಆಪ್ತ ಸಹಾಯಕರು. ವೈದ್ಯಕೀಯ ಶಿಕ್ಷಣ ಇಲಾಖೆ.
7) ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.